ಸಾಕ್ಷಿಯನ್ನು ದಿ: 09.07.2025 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಡಿ.ಡಬ್ಲ್ಯೂ-1

**ಪಾಟೀಸವಾಲುಃ- ವಾದಿಗಳ ಪರ ವಕೀಲರಿಂದ:-**

1. ವಾದಿಯು ಸಲ್ಲಿಸಿರುವ ದಾವೆಯ ಬಗ್ಗೆ ನನಗೆ ಮಾಹಿತಿ ಇದೆ. ವಾದಿಯರಿಗೆ ದಾವಾ ಆಸ್ತಿಯು ಲಿಂಗಮ್ಮ ಉಃ ತಾಯಮ್ಮರವರಿಂದ ಕ್ರಯದ ಮೂಲಕ ಬಂದಿರುತ್ತದೆ. ದಾವಾ ಆಸ್ತಿಯ ಅಳತೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಅಳತೆಯು 29 * 93 ಅಡಿ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆಃ ಬೋರೇಗೌಡರ ಮನೆ, ಪಶ್ಚಿಮಕ್ಕೆಃ ಮೊಲ್ಲೇಗೌಡರವರ ಆಸ್ತಿ, ಉತ್ತರಕ್ಕೆಃ ರಸ್ತೆಯಿದೆ ಹಾಗೂ ದಕ್ಷಿಣಕ್ಕೆಃ ನಮ್ಮ ಮನೆಯಿದೆ ಎಂದರೆ ಸರಿ. ಸದರಿ ಚೆಕ್ಕುಬಂದಿಯಲ್ಲಿ 29 * 93 ಅಡಿ ಅಳತೆಯ ಆಸ್ತಿಯನ್ನು ವಾದಿಯು ತಾಯಮ್ಮರವರಿಂದ ಖರೀದಿ ಮಾಡಿದ್ದಾರೆಂದರೆ ಸರಿಯಲ್ಲ. ಅದರ ನಂತರ ವಾದಿಯ ಹೆಸರಿಗೆ ಖಾತೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ.

2. ನಮಗೆ ಸಂಬಂಧಿಸಿದ ಆಸ್ತಿಯು ಪಿತ್ರಾರ್ಜಿತವಾಗಿ ಬಂದಿರುತ್ತದೆ. ನಾವು ವಾಸವಾಗಿರುವ ಮನೆಯ ಅಳತೆಯು 25 * 48 ಅಡಿ ಇದೆ. ನಾನು ವಾದಿಯ ಹೆಸರಿಗಿದ್ದ ಆಸ್ತಿಯ 6 ಅಡಿ ಜಾಗವನ್ನು ಒತ್ತುವರಿ ಮಾಡಿದ್ದರಿಂದ ಪ್ರಸ್ತುತ ದಾವೆ ಸಲ್ಲಿಸಿದ್ದಾರೆಂದರೆ ಸರಿಯಲ್ಲ. ನಮ್ಮ ಹಾಗೂ ವಾದಿಯರ ಆಸ್ತಿಯ ನಡುವೆ ಬೇಲಿಯಿದೆ ಎಂದರೆ ಸರಿ. ಅದಕ್ಕೆ ಸಂಬಂಧಿಸಿದ ಭಾವಚಿತ್ರವನ್ನು ನಾನು ಹಾಜರು ಪಡಿಸಿದ್ದು ಈಗ ಸದರಿ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ.7 ಎಂದು ಗುರುತಿಸಲಾಯಿತು.

3. ಈಗ ನಾನು ನೋಡುತ್ತಿರುವ ಭಾವಚಿತ್ರದಲ್ಲಿ ವಾದಿಗೆ ಸೇರಿದ ಮನೆಯಿದೆ ಎಂದರೆ ಸರಿ. ಸದರಿ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ.7 ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರದಲ್ಲಿರುವ ಖಾಲಿ ಜಾಗವು ವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ಈಗ ನಾನು ನೋಡುತ್ತಿರುವ ಭಾವಚಿತ್ರದಲ್ಲಿ ವಾದಿಯು ಪಿಟ್ ಮಾಡಿಕೊಂಡಿದ್ದಾರೆಂದರೆ ಸರಿ. ಸದರಿ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ

ಅದನ್ನು ನಿಪಿ.8 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಸದರಿ ಪಿಟ್ಟನ್ನು ವಾದಿಯು ಅವರಿಗೆ ಸಂಬಂಧಿಸಿದ ಆಸ್ತಿಯಲ್ಲಿ ಮಾಡಿಕೊಂಡಿದ್ದಾರೆಂದು ನುಡಿಯುತ್ತಾರೆ.

4. ನಿಡಿ.7 ಭಾವಚಿತ್ರದಲ್ಲಿರುವ ಬೇಲಿಯನ್ನು ವಾದಿಯು ನಮಗೆ ಸೇರಿದ ಜಾಗದಲ್ಲಿ ಹಾಕಿಕೊಂಡಿದ್ದಾರೆ. ನನಗೆ ಇ-ಸ್ವತ್ತು ನೀಡುವ ಮೊದಲು ಗ್ರಾಮ ಪಂಚಾಯಿತಿಯಿಂದ 15 ಜನ ಬಂದು ಅಳತೆ ಮಾಡಿರುತ್ತಾರೆ. ಆಗ ಬಾಜುದಾರರಿಗೆ ನೋಟೀಸು ಕೊಟ್ಟಿದ್ದರು, ಯಾರೂ ಬರಲಿಲ್ಲ. ಸದರಿ ನೋಟೀಸನ್ನು ವಕೀಲರಿಗೆ ಕೊಟ್ಟಿದ್ದೇನೆ. ದಾವಾ ಆಸ್ತಿ ಹಾಗೂ ನನಗೆ ಸೇರಿದ ಆಸ್ತಿಯನ್ನು ಅಳತೆ ಮಾಡಿಸಲು ನನಗೆ ತಕರಾರು ಇಲ್ಲ.

5. ನಾನು ಗ್ರಾಮ ಪಂಚಾಯಿತಿಗೆ ಸುಳ್ಳು ಅಳತೆ ತೋರಿಸಿ ಇ-ಸ್ವತ್ತು ಪಡೆದಿದ್ದೇನೆಂದರೆ ಸರಿಯಲ್ಲ. ನಾನು ಓಸ್. ಸಂಃ 78/2010 ದಾವೆಯನ್ನು ಶಾಶ್ವತ ನಿರ್ಭಂದಕಾಜ್ಞೆ ಕೋರಿ ಸಲ್ಲಿಸಿದ್ದರಿಂದ ವಾದಿಯು ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸದೆ ಪ್ರಸ್ತುತ ದಾವೆ ಸಲ್ಲಿಸಿದ್ದಾರೆಂದರೆ ಸರಿಯಲ್ಲ. ವಾದಿಯು ನನಗೆ ಯಾವುದೇ ರೀತಿಯ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

6. ವಾದಿಯು ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ. ನಾನು ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ